ಸಾಧ್ಯವಾಗುತ್ತದೆ ಈ ರೀತಿ ಗ್ರಾಮೀಣ ಮತ್ತು ಬಡವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳ ಪೋಷಕರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, 2007–08ನೇ ಸಾಲಿನಿಂದ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷನ್ನು ಒಂದು ವಿಷಯವನ್ನಾಗಿ (ಎರಡನೇ ಭಾಷೆಯಾಗಿ) ಕಲಿಸಲು ದಿ 20 10 2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 37 ಪಿಜಿಸಿ 2003 ರನ್ವಯ ಆಸ್ಪದವನ್ನು ಕಲ್ಪಿಸಲಾಗಿದೆ

ಈ) ಮೊಟ್ಟೆ ವಿತರಿಸುವ ಬಗ್ಗೆ ಸರ್ಕಾರವು ತಾತ್ಕಾಲಿಕ ತಡೆಯಾಜ್ಞೆ ನೀಡಿದೆ

546(945) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಲ್ಲಿ ಶಿಕ್ಷಕರು ತೊಡಗಿರುವುದರಿಂದ ಪಾಠ ಪ್ರವಚನಗಳು ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಗ್ಯಾಸ್ ತರಕಾರಿ, ವಗೈರೆ ತರಲು ಶಿಕ್ಷಕರು ಸಮಯ ಹಾಳು ಮಾಡುತ್ತಿರುವುದು ನಿಜವಲ್ಲವೇ,

ಇ) ಈ ಕಾರ್ಯಕ್ರಮದ ಉಸ್ತುವಾರಿಯನ್ನು ನೋಡಿಕೊಳ್ಳುವ ಯಾರಾದರೂ ಮೇಲ್ವಿಚಾರಕರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆಯೇ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ), ಆ) ಮತ್ತು ಇ) ಎಸ್ ಡಿ ಎಂ ಸಿ ಅಧ್ಯಕ್ಷರು ಮತ್ತು ಮುಖ್ಯ ಅಡುಗೆಯವರನ್ನು ಬಿಸಿಯೂಟ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜವಾಬ್ದಾರರನ್ನಾಗಿ ಮಾಡಲಾಗಿದೆ ಮುಖ್ಯ ಶಿಕ್ಷಕರು, ಅಡುಗೆ ಸಿಬ್ಬಂದಿಗೆ ಪ್ರತಿ ದಿನದ ವಿದ್ಯಾರ್ಥಿಗಳ ಹಾಜರಾತಿಯನ್ನು ನೀಡುವುದು ಮತ್ತು ಊಟ ಬಡಿಸುವಾಗ ಮೇಲ್ವಿಚಾರಣೆ ಮಾತ್ರ ಮಾಡಲು ಸೂಚನೆ ನೀಡಲಾಗಿದೆ ಇದನ್ನು ಹೊರತುಪಡಿಸಿ ಶಿಕ್ಷಕರಿಗೆ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಬೇರೆ

ಜವಾಬ್ದಾರಿ ಇರುವುದಿಲ್ಲ ಈ ಕಾರ್ಯಕ್ರಮದ ಉಸ್ತುವಾರಿಯನ್ನು ಎಸ್ ಡಿ ಎಂ ಸಿ ಅಧ್ಯಕ್ಷರು ಮತ್ತು ಮುಖ್ಯ ಅಡುಗೆಯವರು ನಿರ್ವಹಿಸುತ್ತಿರುವುದರಿಂದ ಬೇರೆ ಮೇಲ್ವಿಚಾರಕರ ನೇಮಕದ ಪ್ರಶ್ನೆ ಉದ್ಭವಿಸುವುದಿಲ್ಲ

547(855) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ 1 4 2004 ರಿಂದ ಇಲ್ಲಿಯವರೆಗೆ ಶಿಕ್ಷಣ ಇಲಾಖೆಗಳಲ್ಲಿ ಮಕ್ಕಳ ಮೇಲಾದ ಲೈಂಗಿಕ ದೌರ್ಜನ್ಯಗಳೆಷ್ಟು, ಎಷ್ಟು ವಯಸ್ಸಿನ ಮಕ್ಕಳ ಮೇಲಾಗಿದೆ, ಎಷ್ಟು ಕೇಸುಗಳನ್ನು ದಾಖಲಿಸಲಾಗಿದೆ,

ಆ) ಶಾಲಾ ಮಕ್ಕಳ ಮೇಲಾಗಿರುವ ಲೈಂಗಿಕ ದೌಜನ್ಯಗಳನ್ನು ತಡೆಯಲು ಕೈಗೊಂಡ ಕಾನೂನಾತ್ಮಕ ಕ್ರಮಗಳೇನು, ಎಷ್ಟು ಅಪರಾಧಿಗಳನ್ನು ಇಲ್ಲಿಯವರೆಗೆ ವಜಾಗೊಳಿಸಲಾಗಿದೆ, ಎಷ್ಟು ಜನರಿಗೆ ಶಿಕ್ಷೆ ವಿಧಿಸಲಾಗಿದೆ,

ಇ) ದೌರ್ಜನ್ಯ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನೇನಾದರೂ ತೆಗೆದುಕೊಳ್ಳಲಾಗಿದೆಯೇ, ತೆಗೆದುಕೊಂಡಿದ್ದರೆ, ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ,

ಈ) ಈ ರೀತಿ ದೌರ್ಜನ್ಯಗಳನ್ನು ತಡೆಯಲು ಹೆಣ್ಣು ಮಕ್ಕಳ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಕಿಯರನ್ನೇ ನೇಮಿಸಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ, ಇಲ್ಲವಾದಲ್ಲಿ, ಕಾರಣಗಳೇನು, ಕೈಗೊಂಡಿದ್ದರೆ, ಅಂತಹ ಸಂಸ್ಥೆಗಳೆಷ್ಟು ಯಾವುವು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳ ಮೇಲೆ 2004 ರಿಂದ 2006ರ ವರೆಗೆ 32 ಲೈಂಗಿಕ ಪ್ರಕರಣಗಳನ್ನು ಗುರ್ತಿಸಲಾಗಿದೆ